ಸೇಷನ್ ಕೇಸ್ ನಂ.22/2025

ಪಿ.ಡಬ್ಲ್ಯೂಃ 3

ಸಿ.ಡಬ್ಲ್ಯೂಃ 27

**ದಿನಾಂಕಃ 25.11.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

21. ಸಾಕ್ಷಿಗೆ ಈಗ ಒಂದು ವಿಡಿಯೋ ತುಣುಕನ್ನು ತೋರಿಸಿದ್ದು ಇದು ನನ್ನ ಮೃತ ತಮ್ಮನ ಮನೆಯ ಎದುರುಗಡೆ ಇರುವ ಹಣ್ಣೇರಿ ರವರ ಮನೆಯ ಮುಂದೆ ಅಳವಡಿಸಿರುವ ಸಿಸಿಟಿವಿಯಲ್ಲಿ ದಾಖಲಾಗಿರುವ ದೃಶ್ಯಾವಳಿಗಳು ಎಂದು ಗುರುತಿಸುತ್ತಾರೆ. ಸಾಕ್ಷಿಯು ಈಗ ದಿಃ 09.10.2024 ರ ಮಧ್ಯಾಹ್ನ 02.58 ಗಂಟೆಯ ದೃಶ್ಯಾವಳಿಗಳನ್ನು ನೋಡಿ ಅದರಲ್ಲಿ ಒಂದು ಬಿಳಿ ಇನೋವಾ ಕಾರು ಮನೆಯ ಪಕ್ಕದಲ್ಲಿ ಬಂದು ನಿಂತುಕೊಳ್ಳುತ್ತದೆ. ಅದು ನನ್ನ ತಮ್ಮ ತನ್ನ ಕೊನೆಯ ಮಗ ಅಕುಲನಿಗೆ ಹುಷಾರು ಇಲ್ಲದ ಕಾರಣ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬಂದಿದ್ದು ಎಂದು ಹೇಳುತ್ತಾರೆ. ಆ ಕಾಲಕ್ಕೆ ಕಾರಿನಿಂದ ಒಬ್ಬ ಹುಡುಗ ಮಳೆ ಬರುತ್ತಿದ್ದರಿಂದ ತಲೆಯ ಮೇಲೆ ಒಂದು ಕವರ್ ನ್ನು ಹಿಡಿದು ಮನೆಯ ಒಳಗೆ ಹೋಗುತ್ತಾನೆ ಆತನನ್ನು ನೋಡಿ ಇತನೇ ನನ್ನ ತಮ್ಮನ ಮಗ ಅಕುಲ ಎಂದು ಗುರುತಿಸುತ್ತಾರೆ. 03.00 ಗಂಟೆ ಸಮಯಕ್ಕೆ ಇನೋವಾ ಕಾರಿನಿಂದ ಮತ್ತೊಬ್ಬ ವ್ಯಕ್ತಿ ಇಳಿದು ತನ್ನ ಎಡಪಕ್ಕೆಯ ಬಳಿ ಒಂದು ಬ್ಯಾಗನ್ನು ಹಿಡಿದು ಮನೆಯ ಒಳಗೆ ಹೋಗುತ್ತಾನೆ ಆತನೇ ನನ್ನ ತಮ್ಮ ಮೃತ ಸಂತೋಷ ಪದ್ಮನ್ನನವರ ಎಂದು ಹೇಳುತ್ತಾರೆ. ಮತ್ತೊಂದು ವಿಡಿಯೋ ತುಣುಕನ್ನು ನೋಡಿ ಈ ಹಿಂದೆ ಮನೆಯ ಒಳಗೆ ಹೋಗಿದ್ದ ಅಕುಲನು ಬಟ್ಟೆ ಬದಲಾಯಿಸಿ ಹೊರಗೆ ಬಂದು ಇನೋವಾದಲ್ಲಿದ್ದ ಯಾವುದೋ ವಸ್ತುವನ್ನು ಒಂದು ಕವರ್ ನಲ್ಲಿ ಹಾಕಿಕೊಂಡು ಮತ್ತೇ ಮನೆಯ ಒಳಗೆ ಹೋಗುತ್ತಾನೆ. ಇದು ಆ ದಿನ ಮಧ್ಯಾಹ್ನ 03.04:41 ಸೆಕೆಂಡಿಗೆ ದಾಖಲಾಗಿದೆ. ಸದರಿ ದೃಶ್ಯಾವಳಿಗಳನ್ನು ನ್ಯಾಯಾಲಯದ ಗಣಕಯಂತ್ರದಲ್ಲೂ ಸಹ ಸಂಗ್ರಹಿಸಿಟ್ಟುಕೊಳ್ಳಲಾಗಿದೆ. ಸಾಕ್ಷಿಯು ಈಗ ದಿಃ 09.10.2024 ರ ರಾತ್ರಿ 09:31:16 ಗಂಟೆಯ ದೃಶ್ಯಾವಳಿಗಳನ್ನು ನೋಡಿ ಅದರಲ್ಲಿ ಈಗ ಡಾಃ ಕುಲಕರ್ಣಿ ರವರು ನನ್ನ ತಮ್ಮ ಆತ ತೀರಿಕೊಂಡಿದ್ದಾನೆಂದು ನಮಗೆ ತಿಳಿಸಿದ ನಂತರ ನನ್ನ ಮಗ ಶರತ್ ನ ಜೊತೆಗೆ ಹೊರಗೆ

ಬರುತ್ತಿದ್ದು ಬಂದ ನಂತರ ಅವರನ್ನು ಐ-20 ವಾಹನದಲ್ಲಿ ಅವರನ್ನ ಅವರ ಆಸ್ಪತ್ರೆಗೆ ಬಿಡಲು ಕರೆದುಕೊಂಡು ಹೋಗುತ್ತಿರುವ ದೃಶ್ಯ ಎಂದು ಗುರುತಿಸುತ್ತಾರೆ.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಸಮಯ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನ ಅವಧಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

**ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಗೆ ಮೃತನ ಮನೆಯಲ್ಲಿ ಅಳವಡಿಸಿದ್ದ ಸಿಸಿಟಿವಿ ದೃಶ್ಯಾವಳಿಗಳನ್ನು ತೋರಿಸಿ ಸಾಕ್ಷಿಯನ್ನು ದಾಖಲಿಸುವುದು ಅವಶ್ಯಕತೆಯಿದೆ, ಆದರೆ ನಿಪಿ-4 ರ ಹಾರ್ಡ್‌ಡಿಸ್ಕ ನಲ್ಲಿ ಸ್ಟೋರಾಗಿರುವ ಮೃತನ ಮನೆಯ ಸಿಸಿಟಿವಿ ದೃಶ್ಯಾವಳಿಗಳು ನ್ಯಾಯಾಲಯದಲ್ಲಿರುವ ಗಣಕಯಂತ್ರದಲ್ಲಿ ಪ್ಲೇ ಆಗದ ಕಾರಣ ಹಾಗೂ ಅವುಗಳನ್ನು ಪ್ಲೇ ಮಾಡಲು ಸಾಪ್ಟವೇರ ತಂತ್ರಜ್ಞಾನಿಯ ಸಹಾಯದ ಅವಶ್ಯಕತೆಯಿದಿದ್ದರಿಂದ ಈ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ನಾಳೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.